24-9-89
1-10-89

20-8-1989 [illegible] 12-8-1990.

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA - CHM. ಫೋನ್ : 114

1ನೇ ವರ್ಷ 1ನೇ ಸಂಚಿಕೆ ಕೊಪ್ಪ 20-8-1989 ಭಾನುವಾರ ಬೆಲೆ 50 ಪೈಸೆ

ಕೊಪ್ಪ ತಾ|| ಮಟ್ಟದ ದಸರಾ ಕ್ರೀಡಾಕೂಟ

ಕೊಪ್ಪ : ಸೆಪ್ಟೆಂಬರ್ ಮೊದಲ ವಾರದಲ್ಲಿ ನಡೆಯಲಿರುವ ಜಿಲ್ಲಾ ಮಟ್ಟದ ದಸರಾ ಕ್ರೀಡಾ ಕೂಟದಲ್ಲಿ ಭಾಗವಹಿಸುವ ಕೊಪ್ಪ ತಾಲ್ಲೂಕಿನ ಕ್ರೀಡಾಪಟುಗಳನ್ನು ಆಯ್ಕೆ ಮಾಡಲು ಇದೇ ಆಗಸ್ಟ್ ತಿಂಗಳ ಕೊನೇ ವಾರದಲ್ಲಿ ಆಯ್ಕೆ ಸ್ಪರ್ಧೆಗಳು ನಡೆಯುತ್ತವೆ. ಆಯ್ಕೆಯ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು.

ಆಸಕ್ತರು ಕೊಪ್ಪ ತಾಲ್ಲೂಕಿನ ಯುವಜನ ಸೇವಾಧಿಕಾರಿ ಕರುಣಾಕರ ಶೆಟ್ಟಿ ಇವರನ್ನು ಸಂಪರ್ಕಿಸಿ. ಹೆಚ್ಚಿನ ಮಾಹಿತಿಗಳನ್ನು ಪಡೆಯಬಹುದು

ಸ್ಪರ್ಧೆಯಲ್ಲಿ ಪುರುಷರು, ಮಹಿಳೆಯರು ಹಾಗೂ 16 ವರ್ಷದೊಳಗಿನ ಬಾಲಕ-ಬಾಲಕಿಯರೆಂದು ನಾಲ್ಕು ವಿಭಾಗಗಳಲ್ಲಿ ಈ ಕೆಳಕಂಡ ಸ್ಪರ್ಧೆಗಳಿರುತ್ತವೆ. 100 ಮೀ., 200 ಮೀ , 400ಮೀ , 800 ಮೀ ಮತ್ತು 1500 ಮೀ. ಓಟ, ಎತ್ತರ ಮತ್ತು ದೂರ ಜಿಗಿತ, ಗುಂಡೆಸೆತ, ಜಾವೆಲಿನ್ ಎಸೆತ, 4×100 ಮೀ. ರಿಲೇ, ಖೊ-ಖೊ, ಕಬಡ್ಡಿ ಮತ್ತು ವಾಲಿಬಾಲ್. (ವರದಿ : ಹ. ಪ. ಗೋಪಾಲ್)

ಕಳ್ಳ ಮಾರಾಟದ ಪೆಟ್ರೋಲಿಗೆ ಸಿಗರೇಟಿನಿಂದ ಬೆಂಕಿ ತಗುಲಿ ಬಡ ಕೃಷಿ ಕಾರ್ಮಿಕನ ಸಜೀವ ದಹನ!

ಕಮ್ಮರಡಿ : ಇಲ್ಲಿನ ದಿನಸಿ ಅಂಗಡಿಯೊಂದರಲ್ಲಿ ಅಕ್ರಮವಾಗಿ ಮಾರುತ್ತಿದ್ದ ಪೆಟ್ರೋಲಿಗೆ ಆ. 12 ರಂದು ಆಕಸ್ಮಾತ್ ಬೆಂಕಿ ತಗುಲಿ, ಬಂಡಿಗಡಿ ಸಮೀಪದ ಕಾಗಿನಗೊಳ್ಳಿಯ ಶುಕ್ರ ನಾಯ್ಕ ಸಜೀವ ದಹನವಾಗಿ ಹೋದರು.

ಅಂಗಡಿ ಮಾಲೀಕ ಕೊಂಗವಳ್ಳಿ ರಾಮಪ್ಪ ಅಂದು 11 ಗಂಟೆ ಹೊತ್ತಿನಲ್ಲಿ ಟಿ.ವಿ.ಎಸ್ ಸ್ಕೂಟರಿಗೆ ಹಾಕಲು 20 ಲೀಟರ್ ಕ್ಯಾನಿನಿಂದ 5 ಲೀ. ಕ್ಯಾನಿಗೆ ಪೆಟ್ರೋಲ್ ಬಗ್ಗಿಸುವಾಗ ಅವರ ಕೈಯಲ್ಲೇ ಇದ್ದ ಸಿಗರೇಟಿನಿಂದ ಪೆಟ್ರೋಲಿಗೆ ಬೆಂಕಿ ಹತ್ತಿಕೊಂಡು ಅವರ ಕೈಗೂ ಉರಿ ತಗುಲಿತು. ಕೂಡಲೇ 5 ಲೀಟರಿನ ಭರ್ತಿ ಕ್ಯಾನನ್ನು ಅಂಗಳಕ್ಕೆ ಬಿಸಾಡಿದರು.

ಅದು ಎಲೆ-ಅಡಿಕೆಗಾಗಿ ಅಂಗಡಿಗೆ ಬರುತ್ತಿದ್ದ ಶುಕ್ರ ನಾಯ್ಕರ ತಲೆಯ ಮೇಲೇ ಬಿದ್ದು ಅವರ ಇಡೀ ಮೈಗೆ ಬೆಂಕಿ ಹತ್ತಿಕೊಂಡಿತು. ಗುಜರಿ ಸಂಗ್ರಹಿಸುವ ಅಲೆಮಾರಿ ಜನಾಂಗದ ಶೀನ ಎಂಬ ಹುಡುಗನ ಕಾಲುಗಳ ಮೇಲೂ ಪೆಟ್ರೋಲ್ ತುಳುಕಿ ಅವನಿಗೂ ಬೆಂಕಿ ಹೊತ್ತಿಕೊಂಡಿತು.

ಕೂಡಲೇ ಸುತ್ತಮುತ್ತ ಇದ್ದವರು, ಮುಖ್ಯವಾಗಿ ಬಸ್ ಡ್ರೈವರ್ ಮಹಮದ್ ಅಮೀರ್ ಇವರುಗಳ ಬಟ್ಟೆ ಹರಿದು ಹಾಕಿದರಾದರೂ ನಾಯ್ಕರ ಇಡೀ ಶರೀರ ಸುಟ್ಟಾಗಿತ್ತು. ಶೀನನ ಎರಡೂ ಕಾಲುಗಳೂ ತೊಡೆಯಿಂದ ಕೆಳಗೆ ಬೆಂದುಹೋಗಿದ್ದವು. ಕೂಡಲೇ ಅವರಿಬ್ಬರನ್ನೂ ತೀರ್ಥಹಳ್ಳಿ ಆಸ್ಪತ್ರೆಗೆ ಒಯ್ದು, ಅಲ್ಲಿಂದ ಮಣಿಪಾಲ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಶುಕ್ರ ನಾಯ್ಕ 14ರ ಬೆಳಗಿನ ಜಾವ ತೀರಿಕೊಂಡರು. ಶೀನ ಪ್ರಾಣಾಪಾಯದಿಂದ ಪಾರಾಗಿದ್ದು, ಇನ್ನೂ 1 ತಿಂಗಳು ಆಸ್ಪತ್ರೆಯಲ್ಲಿರಬೇಕಾಗಬಹುದು ಎನ್ನಲಾಗಿದೆ.

ಇತ್ತ ಅಂಗಡಿಯಲ್ಲಿ 20 ಲೀಟರ್ ಕ್ಯಾನ್‌ನಲ್ಲಿದ್ದ ಮಿಕ್ಕ ಪೆಟ್ರೋಲಿಗೂ ಬೆಂಕಿ ತಗುಲಿ, ಅಂಗಡಿಯ ಶಟರ್ಸ್ ಕರಗಿ, ಸುಮಾರು ಸಾಮಾನುಗಳೂ ಸುಟ್ಟು ಐದಾರು ಸಾವಿರ ರೂ. ನಷ್ಟವಾಗಿರುವುದಾಗಿ ಅಂದಾಜು ಮಾಡಲಾಗಿದೆ.

ಬೆಂಕಿ ಹತ್ತಿದ ಕೂಡಲೇ ಹಿಂದಿನ ಬಾಗಿಲಿಂದ ಓಡಿಹೋದ ರಾಮಪ್ಪ, ನ.ರಾ.ಪುರ ಕೋರ್ಟಿನಲ್ಲಿರುವ ತನ್ನ ಬಂಧುವೊಬ್ಬರ ನೆರವಿನಿಂದ ನಿರೀಕ್ಷಣಾ ಜಾಮೀನು ಪಡೆದು, ತಲೆ ತಪ್ಪಿಸಿಕೊಂಡಿದ್ದಾರೆಂದು ತಿಳಿದು ಬಂದಿದೆ. ಪ್ರಕರಣವನ್ನು ಹರಿಹರಪುರ ಸಬ್ ಇನ್ಸ್‌ಪೆಕ್ಟರ್ ಮಂಜುನಾಥಯ್ಯ ದಾಖಲು ಮಾಡಿಕೊಂಡಿದ್ದು, ಸರ್ಕಲ್ ಇನ್ಸ್‌ಪೆಕ್ಟರ್ ಕೇಶವಾನಂದ ತನಿಖೆ ಮುಂದುವರಿಸಿದ್ದಾರೆ.

52 ವರ್ಷದ ಶುಕ್ರ ನಾಯ್ಕರಿಗೆ ಮಡದಿ, ಇಬ್ಬರು ವಯಸ್ಕ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಈ ಕುಟುಂಬಕ್ಕೆ 'ಆಶಾ ಕಿರಣ' ಯೋಜನೆಯಡಿ 5 ಸಾವಿರ ರೂ. ಪರಿಹಾರ ಕೊಡಿಸಲು ಸಬ್ ಇನ್ಸ್‌ಪೆಕ್ಟರ್ ಮತ್ತು ಕೊಪ್ಪ ತಹಸೀಲ್ದಾರ್ ಪ್ರಯತ್ನಿಸಿದ್ದಾರೆ.

ಆದರೆ ಇಡೀ ಪ್ರಕರಣವನ್ನು ಕೆಲವರು ಪ್ರಭಾವಿಗಳು ದಿಕ್ಕು ತಪ್ಪಿಸಿ, ಒಬ್ಬ 'ಜಾತಿ ಮಗನನ್ನು' ಬಚಾವು ಮಾಡುವ ಪ್ರಯತ್ನ ಕೈಗೊಳ್ಳುತ್ತಿರುವುದು ಕಂಡು ಬರುತ್ತದೆ. 'ಯಾರದೋ' ಅಚಾತುರ್ಯದಿಂದ ಬೆಂಕಿ ತಗುಲಿದ್ದೆಂದೂ, ಉರಿವ ಪೆಟ್ರೋಲ್ ತಲೆ ಮೇಲೆ ಬಿದ್ದಾಗ ಶುಕ್ರ ನಾಯ್ಕ ಆ ಕಡೆ ಈ ಕಡೆ ಓಡಾಡಿದ್ದರಿಂದ ಅಂಗಡಿಗೆ ಬೆಂಕಿ ತಗುಲಿತೆಂದೂ ಕಾಗಕ್ಕನ ಕತೆ ಹೆಣೆಯಲಾಗಿದೆ!

ಇಲ್ಲಿ ಪೆಟ್ರೋಲ್ ಮಾರುತ್ತಿದ್ದುದು ಊರಿಗೆಲ್ಲ ಗೊತ್ತಿದ್ದರೂ, ಸಾಕ್ಷ್ಯಾಧಾರ ಸಿಗುತ್ತಿಲ್ಲ ಎಂದು ಪೋಲೀಸರು ಹೇಳುತ್ತಾರೆ ಹಾಗೂ ಪ್ರತ್ಯಕ್ಷದರ್ಶಿ ಎನ್ನಲಾದ ಬಸ್ ಡ್ರೈವರ್ ಹೇಳಿಕೆ ಇನ್ನೂ ಪಡೆಯಲಾಗಿಲ್ಲವೆಂದರೆ, ಈ ಪ್ರಕರಣದಲ್ಲಿ ಪೋಲೀಸರು ಎಷ್ಟು ಆಸ್ಥೆ ವಹಿಸಿದ್ದಾರೆಂಬುದು ಅರ್ಥವಾಗುತ್ತೆನ್ನಬಹುದೆ?

ರಾಮಪ್ಪ 'ಊರು ಹಾಳ' ವ್ಯಕ್ತಿಯೇನಲ್ಲ, ತಂಟೆ-ತರಲೆಯಿಲ್ಲದವ ಎಂದು ಒಪ್ಪಿದರೂ, ಪ್ರಕರಣದ ನ್ಯಾಯವಾದ ತನಿಖೆ, ಮೊಕದ್ದಮೆ ಸಾಗಿ, ಸಂತ್ರಸ್ತ ಬಡ ಕುಟುಂಬಕ್ಕಂತೂ ನ್ಯಾಯ ಸಿಗಲೇಬೇಕಷ್ಟೆ? ಇದಾಗಬೇಕಾದರೆ ಪೋಲೀಸರು ಮತ್ತು ಸರಕಾರಿ ವಕೀಲರು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಬೇಕಾಗಿದೆ

ಆತ್ಮಹತ್ಯೆಗೆ ಯತ್ನಿಸಿದ ರೇಂಜರ್ ಪಾರು

ಕೊಪ್ಪ: ಕ್ಷುಲ್ಲಕ ಕಾರಣಕ್ಕೆ ಅಮಾನತುಗೊಳಿಸಲ್ಪಟ್ಟು, ಮೇಲಧಿಕಾರಿಯಿಂದ ಕಿರುಕುಳ, ಮಾನಸಿಕ ಹಿಂಸೆ ತಾಳಲಾರದೆ ಚಿಕ್ಕಮಗಳೂರಿನ ವಲಯ ಅರಣ್ಯಾಧಿಕಾರಿ ರಘುನಾಥ್ ಎಂಬವರು ಆ. 11ರಂದು ಇಲ್ಲಿನ ಹೋಟೆಲೊಂದರಲ್ಲಿ ಟಿಕ್ ಟ್ವೆಂಟಿ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು. ತಕ್ಷಣ ಅವರನ್ನು ಆಸ್ಪತ್ರೆಗೆ ಸೇರಿಸಿ ತುರ್ತು ಚಿಕಿತ್ಸೆ ನೀಡಲಾಗಿ, ಅವರು ಚೇತರಿಸಿಕೊಂಡರು

ತಾ|| ಸರ್ಕಾರಿ ನೌಕರರ ಸಂಘ ಮೇಲಧಿಕಾರಿಯ ಈ ದೌರ್ಜನ್ಯವನ್ನು ಉಗ್ರವಾಗಿ ಖಂಡಿಸಿದೆ. ರೇಂಜರುಗಳ ಸಂಘದ ರಾಜ್ಯ ಪದಾಧಿಕಾರಿಗಳು ಇಲ್ಲಿಗೆ ಭೇಟಿ ಕೊಟ್ಟು ಪರಿಶೀಲಿಸಿ, ಡಿಎಫ್‌ಒ ಗಾರ್ಗ್ ವಿರುದ್ಧ ಉಗ್ರ ಕ್ರಮಕ್ಕೆ ಒತ್ತಾಯಿಸಿದ್ದಾರೆ.

ಕೊಪ್ಪ-ತೀರ್ಥಹಳ್ಳಿ ಮಧ್ಯದ ಗುಡ್ಡೆಕೊಪ್ಪದಲ್ಲಿ ಮನೆಗೆ ನುಗ್ಗಿ 45,000 ರೂ. ದರೋಡೆ

ಕೊಪ್ಪ : ಇಲ್ಲಿಗೆ ಸಮೀಪದ ಗುಣವಂತೆ ಬಳಿ ಮನೆಯೊಂದರಲ್ಲಿ ದರೋಡೆಯ ವಿಫಲ ಯತ್ನ ನಡೆದ ಒಂದೇ ವಾರದಲ್ಲಿ ಸಿದ್ಧರಮಠದ ಬಳಿ [illegible] ಕೊಪ್ಪದ ಮನೆಯೊಂದರಲ್ಲಿ 45000 ರೂ. ಒಡವೆ-ವಸ್ತು ದರೋಡೆ [illegible]

ತೀರ್ಥಹಳ್ಳಿ-ಕೊಪ್ಪ ತಾ|| ಗಳ ನಡುವಿರುವ ಶೇಡ್ಗಾರಿಗೆ 2 ಮೈಲಿ ದೂರದ ಗುಡ್ಡೆಕೊಪ್ಪದ ಕೃಷ್ಣಮೂರ್ತಿಯವರ ಮನೆಗೆ ಆ. 12ರ ಶನಿವಾರ ರಾತ್ರಿ 12-30ರ ಹೊತ್ತಿಗೆ ಬಂದು ಬಾಗಿಲು ಬಡಿದ ವ್ಯಕ್ತಿಗಳು, ಅವರ ತಮ್ಮ ಗಣೇಶನಿಗೆ ಆರೋಗ್ಯ ಸರಿಯಿಲ್ಲವೆಂದು ಹೇಳಿ ಬಾಗಿಲು ತೆಗೆಸಿ ಒಳ ನುಗ್ಗಿದರು. ಕೃಷ್ಣಮೂರ್ತಿ ಅವರಲ್ಲೊಬ್ಬನ ಕೈಗೆ ಕತ್ತಿಯಿಂದ ಕಡಿದರಾದರೂ ಮೂರ್‍ನಾಲ್ಕು ಜನ ಅವರನ್ನು ಹಿಡಿದುಕೊಂಡು, ಕುತ್ತಿಗೆಗೆ ಚಾಕು ಹಿಡಿದು ಗಲಾಟೆ ಮಾಡದಂತೆ ಬೆದರಿಸಿದರು. ಕೃಷ್ಣಮೂರ್ತಿ ಅಲ್ಲದೆ ಮನೆಯಲ್ಲಿ ಅವರ ಹೆಂಡತಿ ಮತ್ತು ಇಬ್ಬರು ಮಕ್ಕಳು ಮಾತ್ರ ಇದ್ದರು.

ಅನಂತರ ಮನೆಯನ್ನೆಲ್ಲ 2 ಗಂಟೆಗೂ ಹೆಚ್ಚು ಕಾಲ ಜಾಲಾಡಿದ 8-10 ಜನರು, ಚಿಕ್ಕ ಮಗುವಿನ ಕಿವಿಯ ಓಲೆಯು ಲಾಗಾಯ್ತು ಎಲ್ಲಾ ಒಡವೆಗಳನ್ನೂ, ಬೆಳ್ಳಿ ಪಾತ್ರೆಗಳು ಮತ್ತು 680 ರೂ. ನಗದು ಸೇರಿದಂತೆ ಒಟ್ಟು ಸುಮಾರು 45 ಸಾವಿರ ರೂ.ಗಳಷ್ಟು ವಸ್ತುಗಳನ್ನು ಲೂಟಿ ಮಾಡಿದರು

ಮನೆಯೊಳಗೆಲ್ಲ ನಿಂಬೆ ಹಣ್ಣು ರಸ ಎರಚಿ ನೀರು ಹಾಕಿ ಹೆಜ್ಜೆಯ ವಾಸನೆ ಉಳಿಯದಂತೆ ಮಾಡಿದ ತಂಡ, ಕೃಷ್ಣಮೂರ್ತಿಯವರನ್ನು ದೇವರ ಕೋಣೆಗೊಯ್ದು, ಯಾರಿಗೂ ಹೇಳದಂತೆ 'ಪ್ರಮಾಣ' ಕೂಡ ಮಾಡಿಸಿತು! ಪಕ್ಕದಲ್ಲೇ ಇದ್ದ ಮಂಜುನಾಥಯ್ಯನವರ ಮನೆಯವರಿಗೆ ಕೂಡ ವಿ[illegible]ನೂ ಗೊತ್ತಾಗದಂತೆ ತಮ್ಮ ಕೆ[illegible]ಸಿದ ತಂಡ ಕತ್ತಲಲ್ಲಿ ಯಶಸ್ವಿಯಾಗಿ ಪರಾರಿಯಾಯಿತು.

ಕೂಡಲೇ ಮಂಜುನಾಥಯ್ಯ ಮನೆಯಿಂದ ಪೋಲೀಸಿಗೆ ತಿಳಿಸಲು ಅವರ ಮನೆಯ ಫೋನ್ ಸಂಪರ್ಕ ತಪ್ಪಿಸಲಾಗಿತ್ತು. ಬೆಳಗ್ಗೆ ಕೊಪ್ಪ ; ಮಾಳೂರು ಪೋಲೀಸರಿಗೆ ಸುದ್ದಿ ಮ[illegible]ಲಾಗಿ, ಅವರುಗಳಲ್ಲದೆ, ಶಿವಮೊಗ್ಗ ಎಸ್ಪಿ ಸಹ ಭೇಟಿ ಕೊಟ್ಟು ಪರಿಶೀಲಿಸಿ[illegible] ಶೇಡ್ಗಾರಿನಿಂದ ಅಲ್ಲಿಯವರೆಗೆ 100-[illegible] ಶರಾಬಿನ ಖಾಲಿ ಪ್ಯಾಕೆಟ್ಟುಗಳು [illegible] ನೋಡಿದರೆ ಕಡೇ ಪಕ್ಷ 25-30 [illegible] ತಂಡವಿತ್ತೆಂದು ಶಂಕಿಸಲಾಗಿದೆ. [illegible] ಮುಂದುವರಿಯುತ್ತಿದೆ.

ಗಂಧ ಕಳ್ಳ ಸಾಗಣೆ ತಂಡದ ಮೂವರ ಬಂಧನ

ಕೊಪ್ಪ : ಸಮೀಪದ ಸಿದ್ಧರಮಠ ಮತ್ತು ಸುತ್ತಮುತ್ತ ಅವ್ಯಾಹತವಾಗಿ ಗಂಧ ಸಾಗಣೆಯಲ್ಲಿ ನಿರತವಾಗಿದ್ದ ಗಾಡಿಕೆರೆ ಪರಮೇಶ್ವರ ಎಂಬವನ ತಂಡವನ್ನು ವಲಯ ಅರಣ್ಯಾಧಿಕಾರಿ ಶ್ರೀನಿವಾಸರಾವ್ ಮತ್ತು ಸಿಬ್ಬಂದಿ ಭೇದಿಸಿ, ಶ್ರೀನಿವಾಸ ಗೌಡ, ಪುಟ್ಟ, ದೇವರಾಜ್ ಎಂಬುವರನ್ನು ಆ. 10ರಂದು ಮಾಲು ಸಹಿತ ಬಂಧಿಸಿದ್ದಾರೆ.

ಹುಚ್ಚು ನರಿ ಕಚ್ಚಿದ ಜಾನುವಾರಿಗೆ ಚಿಕಿತ್ಸೆಗೆ ಆಗ್ರಹ

ಶೃಂಗೇರಿ : ಸಮೀಪದ ಗುಬ್ಬಗೋಡು ಸುತ್ತ ಮುತ್ತ ಹುಚ್ಚು ನರಿಯೊಂದು ಆ. 13 ರಿಂದ ಮೂರ್‍ನಾಲ್ಕು ರಾತ್ರಿ [illegible] ನುಗ್ಗಿ ದನಕರು, ನಾಯಿಗಳು ಮತ್ತು [illegible] ದಾ ಜನರಿಗೆ ಕಚ್ಚಿದ್ದು, ಅವನ್ನು [illegible]

[illegible]

ದಕ್ಷಿಣ ಆಫ್ರಿಕದ ಕರಿಯರ ಸ್ವಾತಂತ್ರ್ಯ ಛಲದ ಸಂಕೇತ
ವಿ ನಿ ಮಾ ಂ ಡೆ ಲಾ

● ನ. ಸುರೇಶ

ಆಲೋಚನಾ ಸಾಮರ್ಥ್ಯವಿಲ್ಲವೆಂದು ನಾವು ತಿಳಿದಿರುವ ಯಃಕಶ್ಚಿತ್ ಪ್ರಾಣಿ ಪಕ್ಷಿಗಳೂ ಸಹ ಸ್ವಾತಂತ್ರ್ಯಕ್ಕಾಗಿ ಚಡಪಡಿಸಿ, ಎಂಥ ಅಪಾಯವನ್ನಾದರೂ ಎದುರಿಸಲು ಸಿದ್ಧವಾಗುವಾಗ, ಮನುಷ್ಯ ಜನಾಂಗವೊಂದನ್ನು ದಾಸ್ಯದಲ್ಲಿಡಲಾದೀತೆ? ಮನುಷ್ಯನ ಸ್ವಾತಂತ್ರ್ಯದ ಹಂಬಲದೆದುರು 'ಅಪಾರ್ಥೇಯ್ಡ್' ನಂಥ ಕಪ್ಪು ಶಾಸನಗಳು ಎಷ್ಟು ಕಾಲ ತಾಳಿಯಾವು……?

'ಸ್ವಾತಂತ್ರ್ಯ ದಿನ'ದ ಗುಂಗಿನಲ್ಲಿ ಮತ್ತೊಂದು ಲೇಖನ.

ಜನರ ಆತ್ಮಾಭಿಮಾನಕ್ಕೆ ಅಗೌರವ ವಾಗುವಂತಹ ಘಟನೆ ಘಟಿಸಿದಾಗೆಲ್ಲ ಹೆಣ್ಣು-ಗಂಡುಗಳೆಂಬ ಭೇದವಿಲ್ಲದೆ ಜನತೆ ಪ್ರತಿಭಟಿಸುತ್ತಾರೆ. ಇದಕ್ಕೊಂದು ಉದಾಹರಣೆ ವಿನಿ ಮಾಂಡೆಲಾ.

ದಕ್ಷಿಣ ಆಫ್ರಿಕಾ ದೇಶದಲ್ಲಿ ಬಹು ಸಂಖ್ಯಾತ ಕರಿಯರನ್ನು ತಮ್ಮ ಪೈಶಾಚಿಕ ಸೈನ್ಯ ಬಲ, ಕಲ್ಲು ಹೃದಯದ 'ಅಪಾರ್ಥೇಯ್ಡ್' ಕಾನೂನು ಮತ್ತು ಅಮೆರಿಕದ ನಿರ್ಲಜ್ಜ ಕೃಪಾಶ್ರಯದ ಬಲದಿಂದಲೇ ತುಳಿದು ಆಳುತ್ತಿರುವ ಅಲ್ಪಸಂಖ್ಯಾತ ಬಿಳಿಯರ ಆಡಳಿತದ ವಿರುದ್ಧ ಸ್ವಾತಂತ್ರ್ಯ ಹೋರಾಟ ನಡೆಸಿರುವ ಕರಿಯರ ಪಾಲಿಗೆ ವಿನಿ ಸ್ವಾತಂತ್ರ್ಯ ಛಲದ ಜೀವಂತ ಸಂಕೇತ

ಟ್ರಾನ್‌ಸ್ಕಿ - ಬಂಟುಸ್ತಾನದ ಥೆಂಬು ವಿನಲ್ಲಿ ಜನಿಸಿದ ವಿನಿ ತನ್ನ 27ನೇ ವಯಸ್ಸಿನಲ್ಲಿ ದ. ಆಫ್ರಿಕಾದ ಕರಿಯರ ಅಗ್ರಗಣ್ಯ ನಾಯಕ ನೆಲ್ಸನ್ ಮಾಂಡೆಲಾ ಅವರನ್ನು (1958ರಲ್ಲಿ) ಮದುವೆಯಾದರು. ಮದುವೆ ಆದ ದಿನವೇ ಬಿಳಿಯರ ಸರ್ಕಾರ ಮಾಂಡೆಲಾರನ್ನು ದೇಶ ದ್ರೋಹದ ಅಪಾದನೆಯ ಮೇಲೆ ಬಂಧಿಸಿ ಕರೆದೊಯ್ದಿತು! ಅಂದಿನಿಂದ ಇಂದಿನವರೆಗೂ ದೇಶದ ವಿಮೋಚನೆಗಾಗಿ ಹೋರಾಟ ನಡೆಸುತ್ತಾ ಜೈಲಿನಲ್ಲಿರುವ ಮಾಂಡೆಲಾರಿಗೆ ಹೋರಾಟದ ಸ್ಫೂರ್ತಿ ಚಿಲುಮೆಯಾಗಿರುವವರು ವಿನಿ ಮಾಂಡೆಲಾ

ಅಂಧಕಾರದ ವರ್ಣದ್ವೇಷದ 'ಅಪಾರ್ಥೇಯ್ಡ್' ಆಳ್ವಿಕೆಯಲ್ಲಿ ಬದುಕುತ್ತಿರುವ ಸಾವಿರಾರು ಕಪ್ಪು ಯುವಕ-ಯುವತಿಯರಿಗೆ ಸ್ಫೂರ್ತಿಯ ಸೆಲೆಯಾಗಿ, ಬಿಳಿಯ ಪೊಲೀಸರ ಬಂಧನ, ದೌರ್ಜನ್ಯ, ಭಯಾನಕ ಕಿರುಕುಳಗಳಿಗೆ ಎದೆ ಸೆಟೆಸಿ ನಿಂತಿದ್ದಾರೆ ವಿನಿ ಮಾಂಡೆಲಾ. ವೈವಾಹಿಕ ಜೀವನದ 31 ವರ್ಷಗಳ ಸುದೀರ್ಘ ಅವಧಿಯಲ್ಲಿ ತನ್ನ ಪತಿಯೊಂದಿಗೆ ಕಾಲ ಕಳೆದ ಸಮಯ ಕೇವಲ ಆರು ತಿಂಗಳು ಮಾತ್ರ! ಅದೂ ಪೋಲೀಸರ ಕಟ್ಟುನಿಟ್ಟು ಕರಾರುಗಳ ಮಧ್ಯೆ.

1964ರಲ್ಲಿ ಮಾಂಡೆಲಾರಿಗೆ ಜೀವಾವಧಿ ಶಿಕ್ಷೆ ವಿಧಿಸಲ್ಪಟ್ಟಿತು. ಇಲ್ಲಿಂದ ವಿನಿಗೆ ಪೋಲೀಸರ ಕಿರುಕುಳ ಇನ್ನಷ್ಟು ಜಾಸ್ತಿಯಾಯಿತು. ವರ್ಷಕ್ಕೆ 40 ಸಲ, ಪ್ರತಿ ಭೇಟಿಗೆ 40 ನಿಮಿಷಗಳ ಕಾಲಾವಕಾಶದಂತೆ ಮಾತ್ರ ಆಕೆ ಪತಿಯನ್ನು ಭೇಟಿಯಾಗಬೇಕಾಗಿದೆ.

1976ರಲ್ಲಿ ಸೊವೆಟೊ ಪ್ರಾಂತ್ಯದ ವಿದ್ಯಾರ್ಥಿಗಳ ಪ್ರತಿಭಟನೆಯನ್ನು ಬೆಂಬಲಿಸುವುದರ ಮುಖಾಂತರ ವಿನಿ ವಿಧ್ಯುಕ್ತವಾಗಿ ಬಿಳಿಯ ಸರಕಾರದ ವಿರುದ್ಧ ಸಮರ ಸಾರಿದರು. ಅಂದಿನಿಂದ ವಿನಿ ಈ ಕಗ್ಗತ್ತಲೆ ಖಂಡದ ನಂದದ ಬೆಳಕಾಗಿದ್ದಾರೆ.

1977ರಲ್ಲಿ ಕ್ರೂರಿ ಸರ್ಕಾರ ವಿನಿಯನ್ನು ಬಂಧಿಸಿ ಯಾವುದೇ ಸೌಕರ್ಯಗಳಿಲ್ಲದ ಒಂದು ಸಣ್ಣ ಪಟ್ಟಣದಲ್ಲಿಟ್ಟಿತು. ಎಂದೂ ಕುಗ್ಗದ ಮನೋಸ್ಥೈರ್ಯದಿಂದ ಈ ಶಿಕ್ಷೆಯನ್ನು ಸವಾಲಾಗಿ ಸ್ವೀಕರಿಸಿದ ವಿನಿ, ಅಲ್ಲಿಯ ಜನರಿಗಾಗಿ 'ಪ್ರಾಜೆಕ್ಟ್ ಗಾರ್ಡನ್' ಯೋಜನೆ ಪ್ರಾರಂಭಿಸಿ, ತರಕಾರಿ, ಹಣ್ಣು-ಹಂಪಲು ಮುಂತಾದ ತಮ್ಮ ನಿತ್ಯದ ಅವಶ್ಯಕತೆಗಳಲ್ಲಿ ಸ್ವಾವಲಂಬನೆ ಸಾಧಿಸುವಂತೆ ಮಾಡಿದರು. ಸಂಚಾರಿ ಆಸ್ಪತ್ರೆ ಪ್ರಾರಂಭಿಸಿ ಹಳ್ಳಿಗೆ ಆರೋಗ್ಯ ದೇವತೆಯಾದರು. ಇದರಿಂದ ಕುಪಿತಗೊಂಡ ಸರ್ಕಾರ ತನ್ನ ಕಾನೂನು ಕಟ್ಟಳೆಗಳನ್ನು ಇನ್ನಷ್ಟು ಬಿಗಿಗೊಳಿಸಿತು. ಸರಕಾರದ ಕಾನೂನನ್ನು ಉಲ್ಲಂಘಿಸಿದ ಆರೋಪದ ಮೇಲೆ ಆವರನ್ನು 13 ಸಲ ನ್ಯಾಯಾಲಯಕ್ಕೆ ಹಾಜರುಪಡಿಸಿತು. ಅನೇಕ ಬಾರಿ ಭದ್ರತಾ ಪಡೆಯು ವಿನಿ ಮಾಂಡೆಲಾರ ಮನೆಯ ಮೇಲೆ ದಾಳಿ ನಡೆಸಿ (ಅನುಮಾನಾಸ್ಪದ ದಾಖಲೆಗಳಿಗಾಗಿ) ಮನೆಯಲ್ಲಿ ಏನೂ ಸಿಗದೆ ನಿರಾಸೆಗೊಂಡಿತು.

ಬಿಳಿಯರ ದೌರ್ಜನ್ಯದ ಎದುರು ಎಂದೂ ಬಾಯಿ ಬಿಡದ ಅಮೆರಿಕಾ ಸರ್ಕಾರ, ಮಾನವ ಹಕ್ಕುಗಳ ನಿಧಿಯಿಂದ ಕೊಡಮಾಡಿದ 10 ಸಾವಿರ ಡಾಲರ್ ಸಹಾಯ ಧನವನ್ನು ವಿನಿ ಮಾಂಡೆಲಾ ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿದರು!

1982ರಲ್ಲಿ ಅಮೇರಿಕಾದ ಹ್ಯಾವರ್ಫರ್ಡ್ ಕಾಲೇಜ್ ವಿನಿ ಮಾಂಡೆಲಾರಿಗೆ ಕಾನೂನಿನ ಗೌರವ ಡಾಕ್ಟರೇಟ್ ಪದವಿಯನ್ನು ಘೋಷಿಸಿದಾಗ ಆಕೆ ಪ್ರಶಸ್ತಿ ಸ್ವೀಕರಿಸಲು ಅಮೆರಿಕಾಕ್ಕೆ ಹೋಗುವುದನ್ನು ಬಿಳಿಯ ಸರ್ಕಾರ ನಿರ್ಬಂಧಿಸಿತು.

ನೆಲ್ಸನ್ ಮಾಂಡೆಲಾರ ಹೋರಾಟದ ಬದುಕನ್ನು ಪುರಸ್ಕರಿಸಿ ಭಾರತ ಸರ್ಕಾರ 1988ರಲ್ಲಿ ಅವರಿಗೆ ನೆಹರೂ ಪಾರಿತೋಷಕ ಘೋಷಿಸಿತು. ಬಿಳಿಯ ಸರಕಾರದ ಕಪ್ಪು ಕಾನೂನು ಇಲ್ಲಿಯೂ ಅಡ್ಡ ಬಂತು. ಪಾರಿತೋಷಕ ಸ್ವೀಕರಿಸಲು ಮಾಂಡೆಲಾ ಭಾರತಕ್ಕೆ ಬರುವ ಮಾತಿರಲಿ, ವಿನಿಯನ್ನು ಕೂಡ ಅಲ್ಲಿನ ಸರ್ಕಾರ ಹೋಗಗೊಡಲಿಲ್ಲ. ಅವರ ಮಗಳನ್ನು ಪಾರಿತೋಷಕ ಸ್ವೀಕರಿಸಲು ಕಳುಹಿಸಿತು.

ನಿಗದಿತ ಬಂಧು - ಬಳಗದವರನ್ನು ಮಾತ್ರ ಭೇಟಿ ಮಾಡುವುದು; ಸರಕಾರದ ಅನುಮತಿ ಪಡೆದು ದೂರವಾಣಿಯನ್ನು ಉಪಯೋಗಿಸುವುದೇ ಮುಂತಾದ ಅನಾಗರಿಕ ನಿರ್ಬಂಧಗಳನ್ನು ಸರ್ಕಾರ ವಿನಿಗೆ ವಿಧಿಸಿದೆ.

ಸ್ವ ಸಾಮರ್ಥ್ಯದಿಂದ, ಸಂಘಟನಾ ಕುಶಲತೆಯಿಂದ, ಅದಮ್ಯ ಸ್ವಾತಂತ್ರ್ಯ ಪ್ರೇಮದಿಂದ ಅಸಂಖ್ಯಾತ ಕರಿಯರ ಹೋರಾಟಕ್ಕೆ ಸ್ಫೂರ್ತಿಯಾಗಿರುವ ವಿನಿ, ಅಲ್ಲಿಯ ಯುವ ಜನಾಂಗದ ಆರಾಧ್ಯ ದೇವತೆಯಾಗಿದ್ದಾರೆ.

ಅವರ ಹೋರಾಟಕ್ಕೆ ಯಶಸಿಗಲಿ ಎಂದು ಹಾರೈಸುವುದರೊಂದಿಗೆ, ನಮಗಿನ್ನೂ ದಕ್ಕದಿರುವ ನಿಜವಾದ ಸ್ವಾತಂತ್ರ್ಯಕ್ಕಾಗಿ ನಾವು ಭಾರತೀಯರು ನಮ್ಮ ಹೋರಾಟಕ್ಕೂ ಸ್ಫೂರ್ತಿಯನ್ನು ಈ ಅದಮ್ಯ ಚೇತನದಲ್ಲಿ ಅರಸಬಹುದಲ್ಲವೆ? ●

ತಿಳುವಳಿಕೆ
○ 'ವದನ' ಶೃಂಗೇರಿ

ಲೇಖಕ ಮತ್ತು ಸಮಾಜ

"ಉಳಿಯುವುದು, ಉಳಿದು ತಿಳಿಯುವುದು, ತಿಳಿದು ಬಾಳುವುದು, ಬಳಿಕ…….. ಅಳಿಯುವುದು". ಇದು 'ಬಾಳ್ವೆಯೆ ಬೆಳಕು' ಎಂದು ತಿಳಿದು ಬಾಳುತ್ತಿರುವ ಲೇಖಕ ಶಿವರಾಮ ಕಾರಂತರ 'ತಿಳುವಳಿಕೆ'

ಬುದ್ಧಿ ಜೀವಿಯೊಬ್ಬ ಓದುತ್ತಾ, ಬರೆಯುತ್ತಾ, ಕೇವಲ ಸಾಹಿತ್ಯೋಪಜೀವಿಯಾಗಿ ಬದುಕಬೇಕೆನ್ನುವ ಸಂಕುಚಿತತೆಯನ್ನು ಪ್ರಶ್ನಿಸಿ ಬದುಕುತ್ತಿರುವವರು ಕಾರಂತರು ನಮ್ಮ ಹಳೆಯ ತಲೆಮಾರಿನ ಲೇಖಕರಲ್ಲೆಲ್ಲಾ ತುಂಬಾ ಸಾಮಾಜಿಕ ಪ್ರಜ್ಞೆ ಮತ್ತು ಕಳಕಳಿಯಿಂದ ಬರೆಯುತ್ತಾ, ಬದುಕುತ್ತಾ, ಕೆಲಸ ಮಾಡುತ್ತಾ ಇರುವವರು ಅವರು. ಅವರ ಸಾಹಿತ್ಯ ಕೃತಿಗಳು ಪಾಂಡಿತ್ಯದ ಉತ್ಪಾದನೆಗಳಲ್ಲ; ಬದುಕಿನ ನೇರ ಅನುಭವದ ಉಪ ವಸ್ತುಗಳು (by products) ಅವು. ಆದ್ದರಿಂದಲೇ ಅವು ಶ್ರೇಷ್ಠ. ಲೇಖಕನೊಬ್ಬ ತಾನು ಬದುಕುತ್ತಿರುವ ಸಮಾಜದ ಆಗು ಹೋಗುಗಳ ಬಗ್ಗೆ ಹೇಗೆ ಪ್ರತಿಕ್ರಿಯಿಸುತ್ತಿದ್ದಾನೆ; ಅವನಲ್ಲಿ ಎಷ್ಟು ಸಾಮಾಜಿಕ ಪ್ರಜ್ಞೆ ಇದೆ— ಎನ್ನುವುದೇ ಅವನ ಶ್ರೇಷ್ಠತೆಯ ಮಾನದಂಡ.

ಕಾರಂತರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದವರು. ನಂತರ 75-76ರ ತುರ್ತುಪರಿಸ್ಥಿಯ ಕಾಲದಲ್ಲೂ ರಾಜಕೀಯವಾಗಿ ಸಕ್ರಿಯರಾಗಿದ್ದವರು. ಈಗ ಈ ಇಳಿವಯಸ್ಸಿನಲ್ಲೂ ಪರಿಸರ ಜಾಗೃತಿಯ ಬಗ್ಗೆ ನೇರ ಬೀದಿಗೇ ಇಳಿಯಲು ತಯಾರಾಗಿರುವ ಕಾರಂತರಂತಹವರು ಬುದ್ಧಿಜೀವಿಗಳು ಸಾಮಾಜಿಕ ಜವಾಬ್ದಾರಿಗಳನ್ನು ಕಡೆಗಣಿಸಿ ಬದುಕಬಾರದು ಎನ್ನುವುದಕ್ಕೆ ಒಂದು ಒಳ್ಳೆಯ ನಿದರ್ಶನ.

ಅಂಥವರ ಬರಹ, ತಿಳುವಳಿಕೆಗಳು ನಮಗೆ ಬೇಕು. ಕ್ರಿಯೆಗೆ ಪ್ರೇರೇಪಿಸದ ಬರಡು ಪಾಂಡಿತ್ಯವಲ್ಲ. ಅದಕ್ಕಾಗಿ ಈ ಅಂಕಣ.

ಪದ್ಯ ದಂಕಣ

ಒಂದು ದೇಶ ಭಕ್ತಿ ಗೀತೆ

ಜಯ ಭಾರತಿ ದಯಾ ಶರಧಿ ನಾವು ನಿನ್ನ ಚಿಣ್ಣರು
ನಿನ್ನ ಎದೆಯ ಹಾಲ ಹೀರಿ ಬೆಳೆದ ನಾವು ಧನ್ಯರು ॥
ಜುಳು ಜುಳು ಜುಳು ಜುಳು ಜುಳು ಜುಳು ಬಳುಕುವಂಥ ನದಿಗಳೋ
ನೆಲದೆದೆಯನು ತಣಿಸುವಂಥ ಮುಗಿಲ ಧಾರೆ ಧಾರೆಗಳೋ
ಗಾಳಿಯ ಗೀತಕ್ಕೆ ತಾಳ ಹಾಕಿ ತೊನೆವ ತೆನೆಗಳೋ ॥ ೧ ॥
ಗಗನಕೆ ಮುತ್ತಿಡುತ ಕತ್ತು ಎತ್ತಿ ನಿಂತ ತರುಗಳೋ
ಮಡಿಲಲ್ಲಿ ಮಡಿಕೆಯಾಗಿ ಅಡಗಿಹ ಸಿರಿ ಗಣಿಗಳೋ
ನೆಲ ಮುಗಿಲಿಗೆ ಸೇತು ಬೆಸೆವ ಖಗ ಮೃಗಗಳ ಸಂಕುಲವೋ ॥ ೨ ॥
ಜಗದಲೆಲ್ಲ ಕತ್ತಲು ಮುತ್ತಿಕ್ಕಿದಂಥ ಕಾಲದಲ್ಲಿ
ಅರಿವಿನ ಶಿಖೆ ಕುಣಿಯುತಿತ್ತೊ ಭಾರತಿಯ ಎದೆಯಲಿ
ಕಲೆ ಶಾಸ್ತ್ರವು ಮೇಳವಿಸಿ ನಲಿಯುತಿತ್ತೋ ಮೆರೆಯುತಿತ್ತೋ ॥ ೩ ॥
ಪರ ದಾಸ್ಯದ ಬೇಡಿಗಳಲಿ ನವೆದರು ತಾ ಬಳಲದೆ
ಸಿಡಿಲ ಮರಿಗಳನ್ನು ಹೆತ್ತೆ ದಾಸ್ಯ ನೊಗವ ಕಳಚಿದೆ
ಮೇರು ಗುರಿಯ ದಾರಿ ಹಿಡಿದು ಸಡಗರದಿ ನಡೆದಿಹೆ ॥ ೪ ॥

—ಗುರುರಾಜ ತಂತ್ರಿ ಪಣಿಯೂರು.

[ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯಲ್ಲಿ, ಕೊಪ್ಪ ಪಟ್ಟಣ ಪ್ರೌಢ ಶಾಲಾ ವಿಭಾಗದ ದೇಶಭಕ್ತಿ ಗೀತೆಯ ಸ್ಪರ್ಧೆಗಾಗಿ ರಚಿಸಿದ ಕವಿತೆ. ಹಾಡಿದ ಸಂತ ಜೋಸೆಫರ ಪ್ರೌಢಶಾಲೆಯ ವಿದ್ಯಾರ್ಥಿಗಳು ಪ್ರಥಮ ಬಹುಮಾನ ಗಳಿಸಿದ್ದಾರೆ.]

ಓದುಗರ ಪತ್ರಗಳು

ಬೋಧಪ್ರದ ಲೇಖನ

ಪ್ರಿಯ ಸಂಪಾದಕರೆ,

ಈ ಬಾರಿಯ ಮುಂಜಾವಿನ '....ಫ್ರೆಂಚ್ ಮಹಾ ಕ್ರಾಂತಿಯ ಕೆಲವು ಪಾಠಗಳು' ಚೆನ್ನಾಗಿದೆ. ಫ್ರೆಂಚ್ ಕ್ರಾಂತಿಯ ಮೈಲಿಗಲ್ಲುಗಳನ್ನು ಸಂಕ್ಷಿಪ್ತವಾಗಿಯಾದರೂ ಉದ್ಬೋಧಕವಾಗಿ ನಿರೂಪಿಸಿದ್ದೀರಿ. ನಮ್ಮ ಭಾರತದ 'ಅವಸ್ಥೆ'ಯ ಬಗ್ಗೆಯೂ ಸಹ. ತುಂಬು ಹೃದಯದ ವಂದನೆಗಳು.

ಡಾ|| ಕೋದಂಡರಾವ್,
ಉತ್ತಮೇಶ್ವರ.

ರಾಜ್ಯದ ಎಲ್ಲಾ ಅಡಿಕೆ ಬೆಳೆಗಾರರ ವೇದಿಕೆ ರಚನೆಯಾಗಲಿ

ಮಾನ್ಯರೆ,

ಈಚಿನ ವರ್ಷಗಳಲ್ಲಿ ಅಡಿಕೆ ಬೆಳೆಗೆ ಮತ್ತು ಬೆಳೆಗಾರರಿಗೆ ಅನೇಕ ರೀತಿಯ ತೊಂದರೆಗಳು ಉಂಟಾಗಿರುವುದು ಎಲ್ಲಾ ಬೆಳೆಗಾರರಿಗೂ ಗೊತ್ತೇ ಇದೆ. ಕಳೆದ ತಿಂಗಳು ಭಯಂಕರ ಮಳೆ, ಬಿರುಗಾಳಿಯಿಂದ ಅನೇಕ ಲಕ್ಷ ರೂಪಾಯಿಗಳ ಅಡಿಕೆ ಫಸಲು ಮತ್ತು ಅಡಿಕೆ ಮರಗಳು ನಾಶವಾದವು ಇನ್ನೊಂದು ಕಡೆ, 2 ವರ್ಷದಿಂದ ಅಡಿಕೆ ಬೆಲೆ ತೀವ್ರ ಕುಸಿದಿದ್ದು ಬೆಳೆಗಾರರೆಲ್ಲಾ ಸಾಲಗಾರರಾಗಿದ್ದಾರೆ. ಅಡಿಕೆ ಮರಕ್ಕೆ ನಾನಾ ರೀತಿಯ ರೋಗಗಳು ಬಂದು ಎಷ್ಟೋ ಅಡಿಕೆ ತೋಟಗಳೇ ನಿರ್ನಾಮವಾಗಿವೆ. ಈ ರೋಗಗಳಿಗೆ ಸೂಕ್ತವಾದ ರೋಗ ಪ್ರತಿಬಂಧಕವನ್ನು ಈವರೆಗೆ ಕಂಡು ಹಿಡಿದಿಲ್ಲ

ಇಷ್ಟೆಲ್ಲಾ ತೊಂದರೆಗಳಿದ್ದೂ, ರಾಜ್ಯದ ಅಡಿಕೆ ಬೆಳೆಗಾರರೆಲ್ಲರೂ ಸಂಘಟಿತರಾಗಿ ಹೋರಾಟ ಮಾಡದೆ, ಒಬ್ಬೊಬ್ಬರೇ ಅಥವಾ ತಾಲ್ಲೂಕಿನಲ್ಲಿ ಕೆಲವರು ಪರಿಹಾರ-ಇನ್ನಿತರ ಸಮಸ್ಯೆಗಳ ಬಗ್ಗೆ ಅರ್ಜಿಗಳನ್ನು ಹಿಡಿದುಕೊಂಡು ಆಫೀಸಿನಿಂದ ಆಫೀಸಿಗೆ ಅಲೆದಾಡಿಯೇ 'ಆಯುಸ್ಸನ್ನು ಕಳೆದುಕೊಳ್ಳುತ್ತಿದ್ದಾರೆ' ಎನ್ನುವಂತಾಗಿದೆ. ಸರ್ಕಾರ ಕೊಡುವ ಅಲ್ಪ ಪರಿಹಾರವು ಬಸ್ ಛಾರ್ಜಿಗೂ ಸಾಕಾಗುವುದಿಲ್ಲವೆಂದರೆ ತಪ್ಪಲ್ಲ.

ಆದ್ದರಿಂದ ಬಯಲು ಸೀಮೆ, ಮಲೆನಾಡು, ಹಾಗೂ ಉತ್ತರ ಕನ್ನಡ-ದಕ್ಷಿಣ ಕನ್ನಡದ ಬೆಳೆಗಾರರೆಂಬ ಭೇದವಿಲ್ಲದೆ, ರಾಜ್ಯದ ಎಲ್ಲಾ ಅಡಿಕೆ ಬೆಳೆಗಾರರ ಸಂಘಟಿತರಾಗಿ ಒಂದೇ ವೇದಿಕೆಯಲ್ಲಿ ಈ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚಿಸಿ ಕೆಲವು ಸಮಸ್ಯೆಗಳನ್ನಾದರೂ ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲವೆ ?

ಅಕ್ಟೋಬರ್ ತಿಂಗಳಲ್ಲಿ ಸಂಸತ್ ಸದಸ್ಯೆ ಡಿ. ಕೆ. ತಾರಾದೇವಿಯವರ ನೇತೃತ್ವದಲ್ಲಿ ಕೊಪ್ಪದಲ್ಲಿ ಅಡಿಕೆ ಬೆಳೆಗಾರರ ವಿಚಾರ ಸಂಕಿರಣ ನಡೆಯುವುದನ್ನೇ ಕರ್ನಾಟಕದ ಎಲ್ಲಾ ಅಡಿಕೆ ಬೆಳೆಗಾರರ ವಿಚಾರ ಸಂಕಿರಣವನ್ನಾಗಿ ಮಾರ್ಪಡಿಸಿ ಬೆಳೆಗಾರರನ್ನೆಲ್ಲಾ ಒಂದೇ ವೇದಿಕೆಯಲ್ಲಿ ತರಲು ರಾಜ್ಯದ ಅಡಿಕೆ ಬೆಳೆಗಾರರ ಸಂಘದ ಪದಾಧಿಕಾರಿಗಳು ಮುಂದಾಗಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವರೆಂದು ಆಶಿಸಬಹುದೆ?

ವಸಂತ್ ಕುಮಾರ್ ಹರ್ಡೀಕರ್,
ಹರಂದೂರು, ಕೊಪ್ಪ.

ಜಿ.ಪ. ಇಂಜಿನಿಯರಿಂಗ್ ವಿಭಾಗದ ಕಳಪೆ ಕಾಮಗಾರಿಗೆ ಪ್ರತಿಭಟನೆ ಅನಿವಾರ್ಯ

ಮಾನ್ಯರೆ,

ಶೃಂಗೇರಿಯ ಜಿಲ್ಲಾ ಪರಿಷತ್ ಇಂಜಿನಿಯರ್ ಅವರ ಬೇಜವಾಬ್ದಾರಿತನದ ಕಳಪೆ ಕಾಮಗಾರಿಗಳ ಬಗ್ಗೆ ಪತ್ರಿಕೆ ಮಾಡಿರುವ ವರದಿ ಸತ್ಯ ಸಂಗತಿಯಾಗಿದೆ.

ಈ ಬಗ್ಗೆ ಇಂಜಿನಿಯರ್ ಅವರು, "ಮೋರಿ ಪೈಪ್‌ಗೆ ಬಾಳೆ ಮರ ಅಡ್ಡ ಸಿಕ್ಕಿ ರಭಸದ ನೆರೆ ನೀರಿಗೆ ಮೋರಿ ಕೊಚ್ಚಿ ಹೋಯಿತು' ಎಂದು ಕೆಲವೆಡೆ ಸ್ಪಷ್ಟನೆ ನೀಡಿದ್ದಾರೆ. ಇದು ಅವರು ಮಾಡಿರುವ ಬಿ. ಇ. ಪದವಿಯ ಬೆಲೆ ಕಳೆದಂತೆಯೇ.

ಇದಲ್ಲದೆ, ಬೇಗಾರು ಪ್ರೌಢ ಶಾಲೆಯಲ್ಲಿ ಒಂದು ಕೊಠಡಿಯ ಕಾಮಗಾರಿಯನ್ನು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರೂ ಆದ ಪ್ರಧಾನರನ್ನು ಕೇಳದೆ, ಪ್ರಧಾನರು ಹೇಳಿದವರಿಗೆ ಕಂಟ್ರಾಕ್ಟ್ ಕೊಟ್ಟರೆ ಬಹುಶಃ ಇವರ 'ಪರ್ಸಂಟೇಜಿಗೆ' ತೊಂದರೆಯಾದೀತೆಂದು ಭಾವಿಸಿ, ಹೊರ ತಾಲ್ಲೂಕಿನಲ್ಲಿ ಕಳಪೆ ಕಾಮಗಾರಿ ಮಾಡಿಕೊಂಡಿರುವವರಿಗೆ ನೀಡಿದ್ದಾರೆ. ಈ ಕಂಟ್ರಾಕ್ಟರರು ಈ ಕೊಠಡಿಗೆ ತಳಪಾಯ ಹಾಕುವಾಗಲೇ ಸಿಮೆಂಟ್ ಬಳಸಿಲ್ಲವೆಂದು ಶಾಲೆಯ ಮುಖ್ಯೋಪಾಧ್ಯಾಯರು ಈಗಾಗಲೇ ಸೂಚಿಸಿದ್ದಾರೆ. ಈ ರೀತಿ ಇಂಜಿನಿಯರಿಂಗ್ ವಿಭಾಗದವರು ಹಣಕ್ಕಾಗಿ ಇಂಥ ಕಳಪೆ ಕಾಮಗಾರಿ ಮಾಡಿಸುವುದರಿಂದ ಸಾರ್ವಜನಿಕರು ಅವರನ್ನು ತರಾಟೆಗೆ ತೆಗೆದುಕೊಂಡರೆ ತಪ್ಪೆ?

ಸಾರ್ವಜನಿಕರ ಪ್ರತಿನಿಧಿಯಾಗಿ ಮರ್ಕಲ್ ಮಂಡಲ ಪ್ರಧಾನರಾದ ಚಂದ್ರಹಾಸ ಗೌಡರು ಈ ಇಂಜಿನಿಯರ್‌ಗಳ ಅನ್ಯಾಯವನ್ನು ಪ್ರತಿಭಟಿಸಿ ಬಯಲಿಗೆಳೆಯುತ್ತಿರುವುದು ಉಚಿತವೇ ಆಗಿದೆ.

—ಸಿ. ನಾರಾಯಣ, ಬೇಗಾರು

ರಾಷ್ಟ್ರೀಯ ನೇತ್ರದಾನ ಪಕ್ಷಾಚರಣೆ

ಚಿಕ್ಕಮಗಳೂರಲ್ಲಿ ನೇತ್ರ ಜೋಡಣೆ ಸೌಲಭ್ಯ

ಕೇಂದ್ರ ಸರ್ಕಾರ ಇದೇ ಆಗಸ್ಟ್ 25 ರಿಂದ ಸೆಪ್ಟೆಂಬರ್ 9ರವರೆಗೆ "ನೇತ್ರ ದಾನದ ರಾಷ್ಟ್ರೀಯ ಪಕ್ಷಾಚರಣೆ"ಯನ್ನು ಘೋಷಿಸಿದೆ.

ತಮ್ಮ ಕಣ್ಣುಗಳನ್ನು ದಾನಮಾಡ ಬಯಸುವವರಿಂದ ಅವರ ಮರಣಾ ನಂತರ ಕಣ್ಣುಗಳನ್ನು ಸಂಗ್ರಹಿಸಿ, ಕಣ್ಣಿಲ್ಲದವರಿಗೆ ಜೋಡಿಸುವ ಶಸ್ತ್ರ ಚಿಕಿತ್ಸಾ ಸೌಲಭ್ಯ ಇದೀಗ ಚಿಕ್ಕಮಗಳೂರಿನ ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಾಗಿದೆ.

ಚಿಕ್ಕಮಗಳೂರಿನ ಲಯನ್ಸ್ ಸಂಸ್ಥೆ ದಾನಿಗಳ ನೆರವಿನಿಂದ 20 ಸಾವಿರ ರೂ. ವೆಚ್ಚದಲ್ಲಿ ಸ್ಥಾಪಿಸಿರುವ ಈ ನೇತ್ರ ಜೋಡಣೆ ಮತ್ತು ಚಿಕಿತ್ಸಾ ಘಟಕದಲ್ಲಿ ಈಚೆಗೆ ನಡೆದ ಪ್ರಪ್ರಥಮ ನೇತ್ರ ಜೋಡಣೆ ಶಸ್ತ್ರ ಚಿಕಿತ್ಸೆ ಯಶಸ್ವಿಯಾಗಿದೆ.

ಜುಲೈ ಮೊದಲ ವಾರದಲ್ಲಿ ಈ ಶಸ್ತ್ರ ಚಿಕಿತ್ಸೆ ನಡೆಯಿತು. ನೇತ್ರ ದಾನ ಮಾಡ ಲಿಚ್ಛಿಸಿದ್ದ ಕೃಷ್ಣಸ್ವಾಮಿ ಎಂಬವರು ನಿಧನರಾದಾಗ ಅವರ ಕಣ್ಣಿನ ಕಾರ್ನಿಯಾವನ್ನು ಸಂಗ್ರಹಿಸಿ, ಸಕ್ರಾಯ ಪಟ್ಟಣದ ಶ್ರೀಮತಿ ಜಯಮ್ಮ ಎಂಬವರಿಗೆ ಜೋಡಿಸಲಾಯಿತು. ಕಡ್ಡಿ ಚುಚ್ಚಿದ್ದರಿಂದ ತಮ್ಮ ಎಡಗಣ್ಣು ಕಳೆದುಕೊಂಡಿದ್ದ ಆಕೆ ಇದೀಗ ಮೊದಲಿನಂತೆಯೇ ದೃಷ್ಟಿ ಪಡೆದಿದ್ದಾರೆ.

ಆಸ್ಪತ್ರೆಯ ನೇತ್ರ ತಜ್ಞ ಡಾ|| ನಾರಾಯಣ ಮೂರ್ತಿ ಈ ಯಶಸ್ವಿ ಶಸ್ತ್ರಕ್ರಿಯೆ ನೆರವೇರಿಸಿದವರು. ಜಿಲ್ಲಾ ಕೇಂದ್ರವೊಂದರಲ್ಲಿ ಇಂಥ ನೇತ್ರ ಜೋಡಣಾ ಘಟಕವೊಂದು ಸ್ಥಾಪನೆಯಾಗಿರುವುದು ದೇಶದಲ್ಲಿ ಇದೇ ಮೊದಲನೆಯದೆಂದು ದೇಶದ ನೇತ್ರ ಸಂಶೋಧನೆಯ ಉನ್ನತ ಸಂಸ್ಥೆಯಾದ ಟ್ರೈವರ್ಸ್ ನೇತ್ರ ಸಂಶೋಧನಾ ಫೌಂಡೇಶನ್ ಶ್ಲಾಘಿಸಿದೆ. ಇಲ್ಲಿಯೂ ನೇತ್ರ ದಾನಿಗಳ ಮತ್ತು ನೇತ್ರದಾನ ಬಯಸುವವರ ಹೆಸರುಗಳನ್ನು ನೋಂದಾಯಿಸಿಕೊಳ್ಳಲಾಗುತ್ತಿದೆ.

ನಮ್ಮ ಪತ್ರಿಕೆಯ 11-6-89ರಲ್ಲಿ ಪ್ರಕಟವಾಗಿದ್ದ "ಸಾವಿನ ನಂತರವೂ ಕಾಣುವ ಕಣ್ಣು...." ಲೇಖನದಲ್ಲಿ ಉಲ್ಲೇಖಿಸಿದ್ದ ಬೆಂಗಳೂರು, ಹುಬ್ಬಳ್ಳಿ, ಮಣಿಪಾಲದ ಆಸ್ಪತ್ರೆಗಳಲ್ಲದೆ, ಆಸಕ್ತರು ಇದೀಗ ಚಿಕ್ಕಮಗಳೂರಿನ ಈ ಆಸ್ಪತ್ರೆಯನ್ನೂ ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿ ಮತ್ತು ನೇತ್ರ ದಾನದ ಅರ್ಜಿ ಫಾರಂಗಳಿಗಾಗಿ ಆಸಕ್ತರು ವಸಂತ ಕುಮಾರ್ ಹರ್ಡೀಕರ್, ಹರಂದೂರು, ಕೊಪ್ಪ-ಇವರನ್ನೂ ಸಂಪರ್ಕಿಸಬಹುದು.

ಅಮೆರಿಕದಲ್ಲಿ 1 ವರ್ಷ ವ್ಯಾಸಂಗಕ್ಕಾಗಿ ರೋಟರಿಯಿಂದ ಅರ್ಜಿ ಆಹ್ವಾನ

ಕೊಪ್ಪ: ರೋಟರಿ ಕ್ಲಬ್‌ನ ಅಂತರರಾಷ್ಟ್ರೀಯ ಯುವಜನ ವಿನಿಮಯ ಯೋಜನೆಯಡಿ, ಅಮೆರಿಕದಲ್ಲಿ ಒಂದು ವರ್ಷದ ವ್ಯಾಸಂಗಕ್ಕಾಗಿ ನೆಲೆಸಲು ಇಚ್ಛಿಸುವ ಯುವಕ-ಯುವತಿಯರಿಂದ ಅರ್ಜಿ ಕರೆಯಲಾಗಿದೆ. ರೋಟರಿ ಜಿಲ್ಲೆ 318 ರಿಂದ ಒಬ್ಬ ಅಭ್ಯರ್ಥಿಗೆ ಅವಕಾಶವಿರುತ್ತದೆ.

1990ರ ಆಗಸ್ಟ್ ಒಳಗೆ ಎಸ್ಸೆಸ್ಸೆಲ್ಸಿ ಪೂರೈಸುವವರು ಅರ್ಹರು. ಒಳ್ಳೆಯ ಶೈಕ್ಷಣಿಕ ಮಟ್ಟ, ಬೇರೊಂದು ದೇಶದ ಆತಿಥೇಯ ಕುಟುಂಬದೊಡನೆ ಇರಬಲ್ಲ ಹೊಂದಾಣಿಕೆಯ ಸಾಮರ್ಥ್ಯ ಇರಬೇಕು. ವಯೋಮಿತಿ 15 ರಿಂದ 18 ವರ್ಷ (ಆಗಸ್ಟ್ 90ಕ್ಕೆ) ಅಭ್ಯರ್ಥಿಯ ತಂದೆ-ತಾಯಿಗಳು ರೋಟರಿ ಸದಸ್ಯರಾಗಿರಬೇಕಾಗಿಲ್ಲ.

ಅಭ್ಯರ್ಥಿಯ ತಂದೆ-ತಾಯಿಗಳು ಅಭ್ಯರ್ಥಿಯ ಹೋಗಿ ಬರುವ ಪ್ರಯಾಣದ ಖರ್ಚು, ಪಾಸ್‌ಪೋರ್ಟ್-ವೀಸಾ ವ್ಯವಸ್ಥೆ, ಬಟ್ಟೆ-ಬರೆ ಹಾಗೂ ಅನಾರೋಗ್ಯ-ಆಕಸ್ಮಿಕಗಳ ಬಗೆಗಿನ ಇನ್ಶೂರೆನ್ಸ್ ವೆಚ್ಚ-ಇವುಗಳನ್ನು ಭರಿಸಬೇಕು ಆತಿಥೇಯ ಕುಟುಂಬ ಅಭ್ಯರ್ಥಿಯ ಊಟ-ವಸತಿ ಮತ್ತು ಶೈಕ್ಷಣಿಕ ವ್ಯವಸ್ಥೆಯನ್ನು ನಿರ್ವಹಿಸುತ್ತದೆ

ಆಸಕ್ತಿಯುಳ್ಳವರು 5-9-89ರೊಳಗಾಗಿ ಅಬುಮಹಮುದ್, (ರೋಟರಿ ಕಾರ್ಯದರ್ಶಿ), ಭಾರತ್ ಪ್ರಾವಿಜನ್ ಸ್ಟೋರ್ಸ್, ಕೊಪ್ಪ-ಇವರಿಗೆ ಬರೆದುಕೊಳ್ಳಬಹುದು.

ಕೊಪ್ಪದಲ್ಲಿ ಇಬ್ಬರು ಹಿರಿಯರ ನಿಧನ

ಕೆ.ಎಸ್. ನರಸಿಂಹಯ್ಯ

ಕೊಪ್ಪದಲ್ಲಿ ಪ್ರಜಾವಾಣಿ ಏಜೆಂಟ್ ಮತ್ತು ಪ್ರತಿನಿಧಿಯಾಗಿದ್ದ ಕೆ. ಎಸ್. ನರಸಿಂಹಯ್ಯ ತಮ್ಮ 71ನೇ ವಯಸ್ಸಿನಲ್ಲಿ ಆ. 15ರಂದು ಹೃದಯಾಘಾತದಿಂದ ನಿಧನರಾದರು.

ಕೊಪ್ಪ, ಶೃಂಗೇರಿ ತಾಲ್ಲೂಕುಗಳ ಹಲವಾರು ಹಳ್ಳಿಗಳಲ್ಲಿ ಶಾಲಾ ಉಪಾಧ್ಯಾಯರು-ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ನರಸಿಂಹಯ್ಯನವರು ಈ ಎರಡೂ ತಾ॥ಗಳಲ್ಲಿ ಅಸಂಖ್ಯ ಮಂದಿ ಶಿಷ್ಯರನ್ನು ಹೊಂದಿದ್ದಾರೆ. ಅವರಲ್ಲಿ ಎಷ್ಟೋ ಜನ ಇಂದು ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಗಳಲ್ಲಿದ್ದಾರೆ.

ಜೀವಮಾನದುದ್ದಕ್ಕೂ ಖಾದಿ ಧರಿಸುವುದನ್ನೊಂದು ವ್ರತದಂತೆ ಅನುಸರಿಸಿದ ಅವರು ನಿವೃತ್ತ ನೌಕರರ ಸಂಘದಲ್ಲಿ ಸಕ್ರಿಯರಾಗಿ ಅದರ ವಿವಿಧ ಹುದ್ದೆಗಳಲ್ಲಿ ದುಡಿದವರು.

ಸಾತ್ವಿಕ, ಸರಳ, ಸ್ನೇಹಜೀವಿಯಾಗಿದ್ದ ನರಸಿಂಹಯ್ಯನವರಿಗೆ ಬಹುಶಃ ಶತ್ರುಗಳೆಂಬವರೇ ಇರಲಿಲ್ಲ. ಶಿಸ್ತಿನ ಜೀವಿಯಾಗಿದ್ದ ಅವರು, ತಮ್ಮ ಮರಣದ ಸಮಯದವರೆಗೂ ಓಡಾಡಿಕೊಂಡು, ತಮ್ಮ ಕೆಲಸ ತಾವೇ ಮಾಡಿಕೊಂಡಿದ್ದರು.

ಒಬ್ಬ ಹೆಣ್ಣು, ನಾಲ್ವರು ಗಂಡು ಮಕ್ಕಳನ್ನೂ ಅಪಾರ ಬಂಧುಗಳು, ಅಭಿಮಾನಿಗಳನ್ನೂ ಹಠಾತ್ ಅಗಲಿ ಹೋದರು.

ಶಿವಣ್ಣ

ಕೊಪ್ಪ ವೀರಭದ್ರ ದೇವಸ್ಥಾನದ ವ್ಯವಸ್ಥಾಪಕರಾಗಿದ್ದ ಶಿವಣ್ಣ ಆ. 16ರಂದು ಅನಾರೋಗ್ಯದಿಂದ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಸುಮಾರು 50 ವರ್ಷದ ಹಿಂದೆ ಟಿ. ನರಸೀಪುರದಿಂದ ಬಂದು ನೆಲೆಸಿದ್ದ ಅವರು ಊರಿನ ಎಲ್ಲರಿಗೂ ವಿಶ್ವಾಸಿಗಳಾಗಿದ್ದರು.

ಅವರ ಕುತ್ತಿಗೆಯಲ್ಲಿದ್ದ ಗಂಟು ಬಾವು ನಾಲ್ಕೈದು ತಿಂಗಳ ಹಿಂದೆ ಒಡೆದು, ಅದರಿಂದಲೇ ನವೆದು ಅಸು ನೀಗಿದರು. ಮಕ್ಕಳಿಲ್ಲದ ಅವರು ವಯಸ್ಸಾದ ಪತ್ನಿ ಮತ್ತು ಬಂಧು ಬಳಗವನ್ನು ಅಗಲಿದ್ದಾರೆ.

ಕಂದಾಯ ಇಲಾಖೆಯಿಂದ ಗ್ರಾಮ ಸಂದರ್ಶನ ಸಭೆ

ಕೊಪ್ಪ : ಹಳ್ಳಿಗರ ವಿವಿಧ ರೀತಿಯ ಅರ್ಜಿಗಳ ಬಗ್ಗೆ ಕ್ರಮ ಕೈಗೊಳ್ಳುವುದು, ದಾಖಲಾತಿ, ನಕಲುಗಳನ್ನೊದಗಿಸುವುದು, ವೃದ್ಧಾಪ್ಯ, ಅಂಗವಿಕಲ, ಅನಾಥ, ವಿಧವಾ ವೇತನಗಳ ರಿಕಾರ್ಡು ತಯಾರಿಸುವುದು, ಆದಾಯ ಪತ್ರ ಇತ್ಯಾದಿ ಎಲ್ಲಾ ತರದ ಕೆಲಸಗಳನ್ನು ಇದೇ ಆ. 16ರಿಂದ 31 ರವರೆಗೆ ನಡೆಯುತ್ತಿರುವ ಗ್ರಾಮ ಸಂದರ್ಶನ ಸಭೆಗಳಲ್ಲಿ ಮಾಡಿಕೊಡಲಾಗುವುದು.

ರೈತರು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

ಪೇಟೆ ಧಾರಣೆ

ಅಡಿಕೆ

ಶಿವಮೊಗ್ಗ : 18-8-1989
ಸರಕು : 3003-3359
ಬೆಟ್ಟೆ : 2311-2635
ಗೊರಬಲು : 1209-1620
ಸಾಗರ : 18.8 1989
ಇಡಿ : 2282-2409
ಚಾಲಿ : 2269-2460
ಆಪಿ : 3275-3459
ಸಿಪ್ಪೆ ಗೋಟು : 1090-1262

ಕಾಳು ಮೆಣಸು

ರೂ. 4386 ರಿಂದ 4509.

ಸಂಪಾದಕ, ಮುದ್ರಕ, ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚು ಕೂಟ, ಕೊಪ್ಪ